# ಗೋಪಿ ಮಾಡಲ್ಲ ಯಾರನ್ನೂ ಕಾಪಿ!

**ರಂಗಭೂಮಿಯಿಂದ ಕಿರುತೆರೆಗೆ ಬಂದು ಈಗ ಹಿರಿತೆರೆಯಲ್ಲಿ ಗಮನ ಸೆಳೆಯುತ್ತಿರುವ ನಟ ಗೋಪಾಲಕೃಷ್ಣ ದೇಶಪಾಂಡೆ. ತನ್ನ ಸ್ವಂತಿಕೆ ಮತ್ತು ಪ್ರತಿಭೆಯ ಬಲದಿಂದಲೇ ಬೆಳೆಯುವ ವಿಶ್ವಾಸ ಅವರಿಗಿದೆ.**

■ ಪದ್ಮನಾಭ ಭಟ್



ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಗಮನಸೆಳೆಯುತ್ತಿರುವ ನಟರಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಒಬ್ಬರು. ‘ಪುಟ್ಟಗೌರಿ ಮದುವೆ’ ಧಾರಾವಾಹಿಯ ಪಾತ್ರದಿಂದ ಜನಪ್ರಿಯರಾಗಿದ್ದ ಅವರು ಇದೀಗ ಹಿರಿತೆರೆಯಲ್ಲಿ ವಿಶಿಷ್ಟ ಪಾತ್ರಗಳ ಮೂಲಕ ತಮ್ಮ ಅಸ್ಮಿತೆಯ ಗುರುತು ಮೂಡಿಸುವ ಯತ್ನದಲ್ಲಿದ್ದಾರೆ.

‘ಮೊದಮೊದಲು ಒಂದೊಂದೇ ಸೀನ್‌ನಲ್ಲಿ ಬಂದು ಹೋಗುವ ಪಾತ್ರ ಸಿಗುತ್ತಿತ್ತು. ಆ ಸೀನ್‌ನಲ್ಲೇ ನಿರ್ದೇಶಕರನ್ನು ಸಾಧ್ಯವಿದ್ದಷ್ಟೂ ಇಂಪ್ರೆಸ್ ಮಾಡಿ ಮತ್ತೊಂದು ಸಿನಿಮಾದಲ್ಲಿ ಇನ್ನಷ್ಟು ದೊಡ್ಡ ಪಾತ್ರ ಗಿಟ್ಟಿಸಿಕೊಳ್ಳಬೇಕು ಎಂದು ಪ್ರಯತ್ನಿಸುತ್ತಿದ್ದೆ’ ಎಂದು ತಮ್ಮ ಸಿನಿಮಾ ಬದುಕಿನ ಆರಂಭದ ದಿನಗಳನ್ನು ನೆನಪಿಸಿಕೊಳ್ಳುವ ಗೋಪಿ ಈಗ ಹಲವು ಸಿನಿಮಾಗಳಲ್ಲಿ ಮುಖ್ಯಪಾತ್ರದಲ್ಲಿಯೇ ನಟಿಸುತ್ತಿದ್ದಾರೆ. ‘ಅರಿಷಡ್ವರ್ಗ’, ‘ಅವನೇ ಶ್ರೀಮನ್ನಾರಾಯಣ’, ‘777 ಚಾರ್ಲಿ’, ‘ಸ್ವಯಂವರ’ ಹೀಗೆ ಅವರು ನಟಿಸುತ್ತಿರುವ ಸಿನಿಮಾಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ‘ಈ ಸಿನಿಮಾಗಳಲ್ಲಿ ನಟಿಸುತ್ತಿರುವ ವಿಷಯವನ್ನು ಈಗಲೇ ಬಹಿರಂಗ ಮಾಡುವ ಹಾಗಿಲ್ಲ’ ಎಂಬ ಷರತ್ತಿಟ್ಟು ಅವರು ಇನ್ನೊಂದಿಷ್ಟು ಸಿನಿಮಾಗಳನ್ನು ಹೆಸರಿಸುತ್ತಾರೆ.

ಗೋಪಿ ಹುಟ್ಟಿದ್ದು ಬೆಳೆದಿದ್ದೆಲ್ಲ ಬಾಗಲಕೋಟೆಯ ಹುನಗುಂದದಲ್ಲಿ. ಅಪ್ಪ ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ರಂಗಶಿಕ್ಷಣ ಪದವಿ ಪಡೆದವರಾದರೂ ಗೋಪಿಗೆ ನಟನೆಯ ಕಡೆಗೆ ಕಿಂಚಿತ್ ಒಲವೂ ಇರಲಿಲ್ಲ. ಓದಿದ್ದು ಬಿಎಸ್.ಸಿ. ಆದರೆ ನಂತರ ಸೇರಿಕೊಂಡಿದ್ದು ಮಾತ್ರ ತಂದೆಗೆ ತರಬೇತಿ ಕೊಟ್ಟ ನೀನಾಸಮ್ ರಂಗಶಿಕ್ಷಣ ಕೇಂದ್ರಕ್ಕೇ. ‘ಯಾರಿಗೂ ಹೇಳ್ಬೇಡಿ’ ಎಂದು ಹೇಳಿಕೊಂಡೇ ತಾವು ನೀನಾಸಮ್ ಸೇರಿಕೊಂಡ ಕಾರಣವನ್ನು ಅವರು ವಿವರಿಸುತ್ತಾರೆ. ಬಿಎಸ್‌ಸಿ ಅಂತಿಮ ವರ್ಷದಲ್ಲಿ ಪಾಸಾಗಲಾರೆ ಎಂಬುದು ಗೊತ್ತಾಗಿ, ಒಂದು ವರ್ಷ ಮನೆಯಲ್ಲಿಯೇ ಬೈಸಿಕೊಂಡು ಇರಬೇಕಲ್ಲ ಎಂಬ ಆತಂಕಕ್ಕೆ ಅವರು ನೀನಾಸಮ್ ಸೇರಿಕೊಳ್ಳಲು ಮನಸ್ಸು ಮಾಡಿದ್ದಂತೆ. ಅಲ್ಲಿ ಒಂದು ವರ್ಷದ ಕೋರ್ಸ್ ಮುಗಿದಾಗ ‘ಮುಂದೇನು?’ ಎಂಬ ಪ್ರಶ್ನೆಗೆ ಅವರ ಬಳಿ ಉತ್ತರ ಇರಲಿಲ್ಲ. ಮುಂದಿನೆರಡು ವರ್ಷ ನೀನಾಸಮ್ ‘ತಿರುಗಾಟ’ದಲ್ಲಿ ಕಳೆಯಿತು. ಮತ್ತೊಂದು ವರ್ಷ ಧಾರವಾಡದಲ್ಲಿ ಮಹದೇವ ಹಡಪದ್ ಜೊತೆ ರಂಗಭೂಮಿ ಕೆಲಸಗಳನ್ನೇ ಮಾಡಿಕೊಳ್ಳುತ್ತ ಕಳೆದರು. ಮತ್ತೆ ನೀನಾಸಮ್‌ಗೆ ಮರಳಿ ಅಲ್ಲಿ ಆರು ತಿಂಗಳ ಕೆಲಸ ಮಾಡಿದರು. ಅಷ್ಟರಲ್ಲಿ ಬೆಂಗಳೂರಿನ ಸೆಳೆತ ಸೇರಿಕೊಂಡಿತ್ತು. ‘ಅಲ್ಲಿಗೆ ಹೋದ್ರೆ ಏನಾದ್ರೂ ಆಗಬಹುದು’ ಎಂಬ ಮಹದಾಸೆಯಲ್ಲಿ ಮಹಾನಗರದ ಬಸ್ ಹತ್ತಿದರು.

ಬೆಂಗಳೂರಿಗೆ ಬಂದ ಮೊದಲ ಎರಡು ವರ್ಷ ಎಲ್ಲ ಕಡೆಗೂ ಹೋಗಿ ಫೋಟೊ ಕೊಡುವುದರಲ್ಲಿಯೇ ಕಳೆದ ಗೋಪಿಗೆ ಮೊದಲು ಅವಕಾಶ ಸಿಕ್ಕಿದ್ದು ಕಿರುತೆರೆಯಲ್ಲಿ. ನಂತರದ ನಾಲ್ಕು ವರ್ಷ ಧಾರಾವಾಹಿ ನಟನೆಯಲ್ಲಿ ಮುಳುಗಿದ್ದ ಅವರಿಗೆ, ಇನ್ನೇನೋ ಮಾಡಬೇಕು ಅನಿಸಲಿಕ್ಕೆ ಶುರುವಾಗಿತ್ತು. ಆಗ ಅವರ ದೃಷ್ಟಿ ಹೊರಳಿದ್ದು ಹಿರಿತೆರೆಯತ್ತ.

ಥಟ್ಟನೇ ನೋಡಿದರೆ ನಟ ಅಚ್ಯುತ್‌ಕುಮಾರ್ ಅವರನ್ನು ನೆನಪಿಸುವ ಗೋಪಿಗೆ ಹಲವರು ‘ಅವರ ಹಾಗೆಯೇ ನಟಿಸುತ್ತೀರಿ’ ಎಂದು ಪ್ರಶಂಸನೆಯ ಧ್ವನಿಯಲ್ಲಿ ಹೇಳುತ್ತಾರೆ. ಆದರೆ ಅವರಿಗೆ ಮಾತ್ರ ಇದು ಮೆಚ್ಚುಗೆಯಾಗಿ ಕಾಣುವುದಿಲ್ಲ; ಹರಿತ ಅಲುಗಾಗಿ ಇರಿಯುತ್ತದೆ. ‘ಯಾಕೆ ನನ್ನ ನಟನೆಯನ್ನು ನೋಡಿ ಅಚ್ಯುತ್ ಅವರನ್ನು ನೆನಪಿಸಿಕೊಳ್ಳುತ್ತಾರೋ ಗೊತ್ತಿಲ್ಲ. ನಾನಂತೂ ಇದುವರೆಗೆ ಅವರನ್ನು ಅನುಸರಿಸಲು ಹೋಗಿಲ್ಲ; ಹೋಗುವುದೂ ಇಲ್ಲ. ಬೇಕಾದರೆ ಇಬ್ಬರ ನಟನೆಯನ್ನೂ ಅಕ್ಕಪಕ್ಕ ಇಟ್ಟುನೋಡಿ. ಆಗ ವ್ಯತ್ಯಾಸ ಅರ್ಥವಾಗುತ್ತದೆ. ಅವರನ್ನಲ್ಲ, ಯಾರನ್ನೂ ಕಾಪಿ ಮಾಡುವ ಅಗತ್ಯ ನನಗಿಲ್ಲ’ ಎಂದು ತುಸು ಬೇಸರದಿಂದಲೇ ಹೇಳುತ್ತಾರೆ ಗೋಪಿ. ಮೊದಮೊದಲು ಇಂಥ ಮಾತುಗಳಿಗೆ ನೊಂದುಕೊಳ್ಳುತ್ತಿದ್ದ ಅವರೀಗ ‘ಅದಕ್ಕೆಲ್ಲ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ನನ್ನ ಪಾಡಿಗೆ ನನಗೆ ಬಂದ ಪಾತ್ರಗಳನ್ನು ಅರ್ಥ ಮಾಡಿಕೊಂಡು ನಟಿಸುತ್ತಾ ಹೋದರೆ ಇಂಥ ಮಾತುಗಳೆಲ್ಲ ತಂತಾನೆಯೇ ಹಿಂದಕ್ಕೆ ಸರಿಯುತ್ತದೆ’ ಎನ್ನುವಷ್ಟು ಗಟ್ಟಿಯಾಗಿದ್ದಾರೆ. ‘ಈ ಆರೋಪವನ್ನು ಪ್ರಜ್ಞಾಪೂರ್ವಕವಾಗಿಯಾದರೂ ಮೀರುತ್ತೇನೆ’ ಎಂಬ ವಿಶ್ವಾಸವೂ ಅವರಿಗಿದೆ.

ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಳ್ಳುತ್ತಿರುವ ಹೊಸಬರ ಹುಮ್ಮಸ್ಸಿನ ಅಲೆ ತನ್ನಂಥವರಿಗೆ ನಟನೆಯ ಅವಕಾಶ ಒದಗಿಸಿಕೊಡುತ್ತಿರುವುದರ ಬಗ್ಗೆ ಅವರಿಗೆ ಸಾಕಷ್ಟು ಖುಷಿಯಿದೆ. ಈ ನಿಟ್ಟನಲ್ಲಿ ಇನ್ನಷ್ಟು ಬದಲಾವಣೆ ಆಗಬೇಕಾದ ಅಗತ್ಯದ ಕುರಿತೂ ಅವರಿಗೆ ಅರಿವಿದೆ. ‘ನನಗೆ ಸಿಕ್ಕ ಪಾತ್ರಗಳನ್ನು ಸಾಧ್ಯವಾದಷ್ಟೂ ಶ್ರದ್ಧೆಯಿಂದ ಅರ್ಥ ಮಾಡಿಕೊಂಡು ನಟಿಸುತ್ತೇನೆ’ ಎಂಬ ಬದ್ಧತೆ ಇರುವ ಗೋಪಿಯ ವೃತ್ತಿಬದುಕಿನ ಉಜ್ವಲ ದಿನಗಳು ಈಗಷ್ಟೇ ತೆರೆದುಕೊಳ್ಳುತ್ತಿವೆ.

ಚಿತ್ರ: ಇರ್ಷಾದ್ ಮಹಮ್ಮದ್